All India Radio: Bangalore
National Bulletin In Kannada
02.06.2026  1.10 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<>><><*><><<>

ಮುಖ್ಯಾಂಶಗಳು

೧. ಸಂಸ್ಕೃತಿ ಮತ್ತು ಅಸ್ಮಿತೆಯನ್ನು ಮರೆಯದಂತೆ ಯುವಜನತೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ

೨. ವಲಸೆ ಮತ್ತು ವಿದೇಶಿಯರ ತಿದ್ದುಪಡಿ ನಿಯಮಗಳು-೨೦೨೬ ಜಾರಿಗೆ  ಕೇಂದ್ರ ಗೃಹ ಸಚಿವಾಲಯ ಅಧಿಸೂಚನೆ

೩. ಸುಪ್ರೀಂಕೋರ್ಟ್‌ನ ಐವರು ನೂತನ ನ್ಯಾಯಮೂರ್ತಿಗಳಿಂದ ಪ್ರಮಾಣವಚನ ಸ್ವೀಕಾರ

೪. ಎಬೋಲಾ ನಿಯಂತ್ರಣಕ್ಕಾಗಿ ಆಫ್ರಿಕಾಗೆ ಭಾರತದಿಂದ ೪೩ ಟನ್ ವೈದ್ಯಕೀಯ ನೆರವು ರವಾನೆ

೫. ನಾರ್ವೆ ಚೆಸ್ ; ೭ನೇ ಸುತ್ತಿನಲ್ಲಿ ಭಾರತದ ಆರ್.ಪ್ರಜ್ಞಾನಂದ, ಡಿ.ಗುಕೇಶ್, ದಿವ್ಯಾ ದೇಶ್‌ಮುಖ್‌ಗೆ ಗೆಲುವು

<>><><*><><<>

ಕಠಿಣ ಪರಿಶ್ರಮದಿಂದ ಉನ್ನತ ಹುದ್ದೆ ಹಾಗೂ ಉತ್ತಮ ವೇತನ ಪಡೆದು ನಗರಗಳಲ್ಲಿ ನೆಲೆಸಿದ ನಂತರವೂ ಯುವಕರು ತಮ್ಮ ಹಳ್ಳಿಗಳನ್ನು, ಸಂಸ್ಕೃತಿಯನ್ನು ಮತ್ತು ಅಸ್ಮಿತೆಯನ್ನು ಮರೆಯಬಾರದು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ತಿಳಿಸಿದ್ದಾರೆ. ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಇಂದು ಆಯೋಜಿಸಲಾದ ಕಾರ್ಯಕ್ರಮದಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಪ್ರಮುಖ ವಿದ್ಯಾರ್ಥಿ ವೇತನ ಯೋಜನೆಗಳ ಫಲಾನುಭವಿಗಳಾಗಿರುವ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಕೇವಲ ೨೫ನೇ ವಯಸ್ಸಿನಲ್ಲೇ ಐತಿಹಾಸಿಕ ಹೋರಾಟದ ನೇತೃತ್ವ ವಹಿಸಿದ್ದ ಭಗವಾನ್ ಬಿರ್ಸಾ ಮುಂಡಾ ಹಾಗೂ ದೇಶಕ್ಕಾಗಿ ಬಲಿದಾನಗೈದ ಅಸಂಖ್ಯಾತ ಬುಡಕಟ್ಟು ನಾಯಕರ ತ್ಯಾಗ ಮತ್ತು ಪರಂಪರೆಯನ್ನು ಇಂದಿನ ಯುವ ಪೀಳಿಗೆ ಸದಾ ಸ್ಮರಿಸಬೇಕು ಎಂದು ಅವರು ಕರೆ ನೀಡಿದರು.

ಸರ್ಕಾರದ ವಿದ್ಯಾರ್ಥಿವೇತನಗಳು ಕೇವಲ ಆರ್ಥಿಕ ನೆರವಲ್ಲ, ಅವು ಸಂಪನ್ಮೂಲಗಳ ಕೊರತೆಯಿರುವ ಪ್ರತಿಭಾವಂತ ಯುವಕರ ಕನಸುಗಳಿಗೆ ರೆಕ್ಕೆ ನೀಡಿ ದೇಶ-ವಿದೇಶಗಳ ಉನ್ನತ ಸಂಸ್ಥೆಗಳಲ್ಲಿ ಕಲಿಯಲು ಹೊಸ ಅವಕಾಶಗಳನ್ನು ಸೃಷ್ಟಿಸಿವೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ಸರ್ಕಾರದ ಸೌಲಭ್ಯಗಳ ಬಗ್ಗೆ ಗ್ರಾಮೀಣ ಭಾಗದ ಇತರೆ ಪ್ರತಿಭಾವಂತ ಮಕ್ಕಳಿಗೆ ಮಾಹಿತಿ ನೀಡಿ, ಸಮಾಜದಲ್ಲಿ ಹಿಂದುಳಿದವರನ್ನು ಕೈಹಿಡಿದು ಮುನ್ನಡೆಸುವುದು ಪ್ರತಿಯೊಬ್ಬ ಯುವ ಸಾಧಕನ ಕರ್ತವ್ಯವಾಗಿದೆ ಎಂದರು.

<>><><*><><<>

ಭಾರತದಲ್ಲಿ ವಾಸಿಸುವ ವಿದೇಶಿ ಪ್ರಜೆಗಳ ನೋಂದಣಿ ಪ್ರಕ್ರಿಯೆ ಮತ್ತು ನಿಯಮಗಳಲ್ಲಿ ಮಹತ್ವದ ಬದಲಾವಣೆಗಳನ್ನು ತರಲು ಕೇಂದ್ರ ಗೃಹ ಸಚಿವಾಲಯ ವಲಸೆ ಮತ್ತು ವಿದೇಶೀಯರ ತಿದ್ದುಪಡಿ ನಿಯಮಗಳು ೨೦೨೬ ರ ಜಾರಿಗೆ ಅಧಿಕೃತ ಅಧಿಸೂಚನೆ ಹೊರಡಿಸಿದೆ. ಹೊಸ ನಿಯಮದ ಪ್ರಕಾರ ಭಾರತಕ್ಕೆ ಆಗಮಿಸುವ ವಿದೇಶೀಯರು ತಮ್ಮ ೧೮೦ ದಿನಗಳ ವಾಸ್ತವ್ಯ ಅವಧಿ ಮುಗಿಯುವ ಮುನ್ನ ಯಾವುದೇ ಸಮಯದಲ್ಲಿ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದಾಗಿದೆ. ಅತ್ಯಂತ ತುರ್ತು ಸಂದರ್ಭಗಳಲ್ಲಿ ಮಾತ್ರ ವಿಳಂಬ ಮಂಡನೆಗೆ ಅವಕಾಶವಿರಲಿದೆ. ಪೋಷಕರಲ್ಲಿ ಒಬ್ಬರು ಭಾರತೀಯ ನಾಗರಿಕರಾಗಿದ್ದು, ಮಗುವಿನ ಭಾರತೀಯ ಪೌರತ್ವವನ್ನು ಉಳಿಸಿಕೊಳ್ಳಲು ಬಯಸಿದರೆ ಅಂತಹ ಮಕ್ಕಳಿಗೆ ಈ ವಿದೇಶಿ ನೋಂದಣಿ ನಿಯಮ ಅನ್ವಯಿಸುವುದಿಲ್ಲ. ಆದರೆ ಮಗು ಭಾರತದಲ್ಲಿದ್ದಾಗಲೇ ವಿದೇಶಿ ಪೌರತ್ವ ಪಡೆದರೆ ೩೦ ದಿನಗಳ ಒಳಗೆ ಅಧಿಕಾರಿಗಳಿಗೆ ಮಾಹಿತಿ ನೀಡುವುದು ಕಡ್ಡಾಯವಾಗಿದೆ. ಯಾವುದೇ ಆದೇಶದ ವಿರುದ್ಧ ವಲಸೆ ಬ್ಯೂರೋ ಆಯುಕ್ತರಿಗೆ ೩೦ ದಿನಗಳ ಒಳಗೆ ಆನ್‌ಲೈನ್‌ನಲ್ಲಿ ಮೇಲ್ಮನವಿ ಸಲ್ಲಿಸಬಹುದು. ಆಯುಕ್ತರು ೬೦ ದಿನಗಳ ಒಳಗೆ ಈ ಅರ್ಜಿಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಲಿದ್ದಾರೆ. ಈ ಹೊಸ ತಿದ್ದುಪಡಿಗಳು ವಿದೇಶಿ ಪ್ರಜೆಗಳ ಮೇಲಿನ ನಿಗಾವನ್ನು ಹೆಚ್ಚಿಸುವುದರ ಜೊತೆಗೆ ಆಡಳಿತಾತ್ಮಕ ಪ್ರಕ್ರಿಯೆಯನ್ನು ಸುಗಮಗೊಳಿಸಲಿವೆ.

<>><><*><><<>

ಸುಪ್ರೀಂ ಕೋರ್ಟ್‌ನ ನೂತನ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿರುವ ಐವರು ನ್ಯಾಯಾಧೀಶರು ಇಂದು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೂತನ ನ್ಯಾಯಮೂರ್ತಿಗಳಿಗೆ ಅಧಿಕಾರದ ಪ್ರಮಾಣ ವಚನ ಬೋಧಿಸಿದರು.

ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ನೇಮಕಾತಿ ಆದೇಶ ಹೊರಡಿಸಿದ್ದರು. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್, ಮಧ್ಯಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಸಚ್‌ದೇವ ಹಾಗೂ ಜಮ್ಮು-ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅರುಣ್ ಪಲ್ಲಿ ಅವರನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾಗಿ ಪದೋನ್ನತಿಗೊಳಿಸಲಾಗಿದೆ.  ಇವರೊಂದಿಗೆ ಹಿರಿಯ ವಕೀಲರಾದ ವೆಂಕಿತ ಸುಬ್ರಮಣಿ ಮೋಹನಾ ಅವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದಾರೆ.

<>><><*><><<>

ಆಫ್ರಿಕಾ ಖಂಡದಲ್ಲಿ ಉಲ್ಬಣಿಸುತ್ತಿರುವ ಎಬೋಲಾ ಸಾಂಕ್ರಾಮಿಕ ರೋಗದ ನಿಯಂತ್ರಣಕ್ಕಾಗಿ ಭಾರತ ಸರ್ಕಾರವು ಇಂದು ೪೩ ಟನ್ ತೂಕದ ಎರಡನೇ ಕಂತಿನ ತುರ್ತು ವೈದ್ಯಕೀಯ ನೆರವನ್ನು ಆಫ್ರಿಕಾ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರಕ್ಕೆ ರವಾನಿಸಿದೆ. ಈ ಕುರಿತು ಮಾಹಿತಿ ನೀಡಿರುವ ಕೇಂದ್ರ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್, ಈ ಜೀವರಕ್ಷಕ ಸರಕಿನಲ್ಲಿ ಸುರಕ್ಷತಾ ಕವಚಗಳು, ರೋಗನಿರ್ಣಯ ಉಪಕರಣಗಳು, ಅಗತ್ಯ ಔಷಧಗಳು ಹಾಗೂ ಪೌಷ್ಟಿಕಾಂಶದ ಪೂರಕಗಳು ಒಳಗೊಂಡಿದ್ದು, ಇದು ಆಫ್ರಿಕಾದ ಸಾರ್ವಜನಿಕ ಆರೋಗ್ಯ ಸನ್ನದ್ಧತೆಯನ್ನು ಮತ್ತಷ್ಟು ಬಲಪಡಿಸಲಿದೆ ಎಂದು ತಿಳಿಸಿದ್ದಾರೆ. ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಪರಿಸ್ಥಿತಿ ಗಂಭೀರವಾಗಿರುವ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು 'ಅಂತಾರಾಷ್ಟ್ರೀಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ' ಎಂದು ಘೋಷಿಸಿದೆ. ಈ ಸಂಕಷ್ಟದ ಸಮಯದಲ್ಲಿ ಭಾರತ ನೀಡುತ್ತಿರುವ ಸಕಾಲಿಕ ಬೆಂಬಲಕ್ಕೆ ಆಫ್ರಿಕಾ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರ ಧನ್ಯವಾದ ಅರ್ಪಿಸಿದೆ. ಕಳೆದ ಮೇ ೨೪ರಂದು ಭಾರತವು ಮೊದಲ ಕಂತಿನ ನೆರವನ್ನು ಕಳುಹಿಸಿಕೊಟ್ಟಿತ್ತು.

<>><><*><><<>

ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ-ಸಿಬಿಎಸ್‌ಸಿ ೧೨ ನೇ ತರಗತಿಯ ವಿದ್ಯಾರ್ಥಿಗಳ ಅಂಕಗಳ ಮರು ಪರಿಶೀಲನೆ ಮತ್ತು ಮರು ಮೌಲ್ಯಮಾಪನ ಪ್ರಕ್ರಿಯೆಯ ಪೋರ್ಟಲ್ ಅನ್ನು ಅಧಿಕೃತವಾಗಿ ಸಕ್ರಿಯಗೊಳಿಸಿದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿರುವ ಮಂಡಳಿ ಅರ್ಜಿ ಸಲ್ಲಿಕೆಯ ಪೋರ್ಟಲ್ ಪ್ರಸ್ತುತ ಮುಕ್ತವಾಗಿದೆ ಎಂದಿದೆ.

ಅಂಕಗಳ ಮರುಪರಿಶೀಲನೆ ಮತ್ತು ಮರು ಮೌಲ್ಯಮಾಪನಕ್ಕೆ ಹಂತ ಹಂತವಾಗಿ ಅರ್ಜಿ ಸಲ್ಲಿಸುವುದರ ಕುರಿತು ವಿವರಗಳಿರುವ ವಿಡಿಯೋವೊಂದನ್ನು ಮಂಡಳಿ ಹಂಚಿಕೊಂಡಿದ್ದು, ವಿದ್ಯಾರ್ಥಿಗಳು ಈ ವಿಡಿಯೋ ವೀಕ್ಷಿಸಿ, ಜಾಗರೂಕತೆಯಿಂದ ಅರ್ಜಿ ಸಲ್ಲಿಸುವಂತೆ ಸಲಹೆ ನೀಡಿದೆ.

<>><><*><><<>

ತೆಲಂಗಾಣ ರಾಜ್ಯೋತ್ಸವದ ಅಂಗವಾಗಿ ತೆಲಂಗಾಣ ಜನತೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಅನೇಕ ಗಣ್ಯರು ಶುಭಾಶಯ ಕೋರಿದ್ದಾರೆ. ತಮ್ಮ ಸಂದೇಶದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಕಠಿಣ ಪರಿಶ್ರಮಿ ಜನರನ್ನು ಹೊಂದಿರುವ ತೆಲಂಗಾಣ ಹೆಮ್ಮೆ ನಾಡಾಗಿದೆ. ಕಳೆದ ಕೆಲವು ವರ್ಷಗಳಲಿ ತೆಲಂಗಾಣ ನಾವೀನ್ಯತೆ ಹಾಗೂ ಅಭಿವೃದ್ಧಿ ವಲಯಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದಿದ್ದಾರೆ.

<>><><*><><<>

ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಅವರಿಂದು ನವದೆಹಲಿಯಲ್ಲಿ ದಕ್ಷಿಣ ಆಫ್ರಿಕಾ ಉಪಾಧ್ಯಕ್ಷ ಪೌಲ್ ಮಾಶಾ ಟಿಲೆ ಅವರನ್ನು ಭೇಟಿ ಮಾಡಿ ಉನ್ನತ ಮಟ್ಟದ ಮಾತುಕತೆ ನಡೆಸಿದರು. ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಸಚಿವರು, ಸಭೆಯ ವೇಳೆ ವ್ಯಾಪಾರ, ಹೂಡಿಕೆ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಡಿಜಿಟಲ್ ಹಾಗೂ ಮೂಲಸೌಕರ್ಯ ವಲಯಗಳಲ್ಲಿನ ದ್ವಿಪಕ್ಷೀಯ ಅವಕಾಶಗಳ ಕುರಿತು ಚರ್ಚಿಸಲಾಗಿದೆ ಎಂದಿದ್ದಾರೆ.

<>><><*><><<>

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರಿಂದು ಇಟಲಿ ದೇಶದ ರಾಷ್ಟ್ರೀಯ ದಿನದ ಸಂದರ್ಭದಲ್ಲಿ ಆ ದೇಶದ ಸರ್ಕಾರ ಮತ್ತು ಜನತೆಗೆ ಸಾಮಾಜಿಕ ಮಾಧ್ಯಮದಲ್ಲಿ ಶುಭಾಶಯ ಕೋರಿದ್ದಾರೆ.

<>><><*><><<>

ಒಡಿಶಾ ಸರ್ಕಾರ ನಾಳೆಯಿಂದ ಇದೇ ೫ ರವರೆಗೆ ಪುರಿ ನಗರದಲ್ಲಿ ಬ್ರಿಕ್ಸ್ ಒಕ್ಕೂಟದ ‘ವಿಪತ್ತು ಅಪಾಯ ಕಡಿತ’ ಕಾರ್ಯಕಾರಿ ಗುಂಪಿನ ಎರಡನೇ ತಾಂತ್ರಿಕ ಸಭೆಯನ್ನು ಆಯೋಜಿಸಲಿದೆ.

ಈ ಜಾಗತಿಕ ಸಭೆಯಲ್ಲಿ ಒಟ್ಟು ೧೧ ದೇಶಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ರಾಜ್ಯ ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ತಿಳಿಸಿದ್ದಾರೆ.

<>><><*><><<>

ಓಸ್ಲೋದಲ್ಲಿ ನಡೆಯುತ್ತಿರುವ ನಾರ್ವೇ ಚೆಸ್-೨೦೨೫ ಪಂದ್ಯಾವಳಿಯ ೭ನೇ ಸುತ್ತಿನಲ್ಲಿ ಭಾರತದ ಯುವ ಗ್ರಾಂಡ್‌ಮಾಸ್ಟರ್ ಪ್ರಜ್ಞಾನಂದ ರಮೇಶ್ ಬಾಬು ಮತ್ತು ದೊಮ್ಮರಾಜು ಗುಕೇಶ್ ಗೆಲುವು ಸಾಧಿಸಿದ್ದು, ಮಹಿಳೆಯರ ವಿಭಾಗದಲ್ಲಿ ಭಾರತದ ದಿವ್ಯಾ ದೇಶ್‌ಮುಖ್ ಹಿರಿಯ ಆಟಗಾರ್ತಿ ಕೊನೇರು ಹಂಪಿ ವಿರುದ್ಧ ಜಯ ದಾಖಲಿಸಿದ್ದಾರೆ. ಪ್ರಜ್ಞಾನಂದ ಕ್ಲಾಸಿಕಲ್ ವಿಭಾಗದ ಪಂದ್ಯದಲ್ಲಿ ಅಲಿರೆಜಾ ಫಿರೌಜಾ ವಿರುದ್ಧ ಗೆಲುವು ದಾಖಲಿಸಿದರೆ, ವಿಶ್ವ ಚಾಂಪಿಯನ್ ಡಿ.ಗುಕೇಶ್ ವೆಸ್ಲಿ ಸೊ ವಿರುದ್ಧ ಆರ್ಮಗೆಡ್ಡನ್ ಟೈಬ್ರೇಕರ್ ಪಂದ್ಯದಲ್ಲಿ ಗೆಲುವು ದಾಖಲಿಸಿದರು.  ಏಳನೇ ಸುತ್ತಿನ ಮುಕ್ತಾಯಕ್ಕೆ ೧೨.೫ ಅಂಕಗಳೊಂದಿಗೆ ವೆಸ್ಲಿ ಸೊ ಅಗ್ರಸ್ಥಾದಲ್ಲಿದ್ದರೆ, ೧೦ ಅಂಕಗಳೊಂದಿಗೆ ಫಿರೌಜಾ ೨ನೇ ಸ್ಥಾನ ಹಾಗೂ ಮ್ಯಾಗ್ನಸ್ ಕಾರ್ಲ್‌ಸನ್ ವಿನ್‌ಸೆಂಟ್ ಕೇಮರ್ ಹಾಗೂ ಪ್ರಜ್ಞಾನಂದ ತಲಾ ೯ ಅಂಕಗಳೊಂದಿಗೆ ನಂತರದ ಸ್ಥಾನದಲ್ಲಿದ್ದಾರೆ. ಮಹಿಳಾ ವಿಭಾಗದಲ್ಲಿ ಭಾರತದ ದಿವ್ಯಾದೇಶ್‌ಮುಖ್ ಮತ್ತು ಕೊನೆರೂ ಹಂಪಿ ನಡುವಿನ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿದ್ದು, ನಂತರ ನಡೆದ ಟೈಬ್ರೇಕರ್ ಪಂದ್ಯದಲ್ಲಿ ದಿವ್ಯಾ ಗೆಲುವು ಸಾಧಿಸಿದರು. ದಿವ್ಯಾದೇಶ್‌ಮುಖ್ ೧೦ ಅಂಕಗಳೊಂದಿಗೆ ಅಂಕ ಪಟ್ಟಿಯಲ್ಲಿ ೨ನೇ ಸ್ಥಾನದಲ್ಲಿದ್ದಾರೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>